# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪಿಯ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಬಡಾವಣೆಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 16/01/2021 ರಂದು ಆಯೋಜಿಸಿದ್ದ ಸಭೆಯ ನಡಾವಳಿಗಳು.

ವಾರ್ಡ್ ಸಂಖ್ಯೆ 24 ಹೆಚ್.ಬಿ.ಆರ್ ಬಡಾವಣೆಯ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಹಮ್ಮಿಕೊಂಡಿದ್ದ ಹಲವಾರು ಸಭೆಗಳಲ್ಲಿ ಪ್ರಮುಖವಾಗಿ ಹಾಗೂ ಇನ್ನಿತರೆ ಇಲಾಖೆಯ ಅಧಿಕಾರಿಗಳು/ನೌಕರರು ಹಾಜರಾಗದೇ ಇರುವುದರಿಂದ ಸಾರ್ವಜನಿಕರ ಕುಂದುಕೊರತೆಗಳನ್ನು ನಿರೀಕ್ಷಿಸಿದ ಪ್ರಮಾಣದಲ್ಲಿ ನಿಗಧಿತ ಸಮಯದಲ್ಲಿ ಪರಿಹರಿಸಲು ಸಾಧ್ಯವಾಗದೇ ಇರುವುದರಿಂದ ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದ ಪಧಾದಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳು ಹಾಗೂ ಸಾರ್ವಜನಿಕರು ಬೇಸರ ವ್ಯಕ್ತಪಡಿಸಿ ಸಮಿತಿಯ ಸಭೆಗೆ ಹಾಜರಾಗದೇ ಇರುವ ಬಗ್ಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರುಗಳಿಗೆ ಇಂದಿನ ಸಭೆಯ ನಡಾವಳಿಗಳನ್ನು ಕಳುಹಿಸಿ ಇದರ ಪ್ರತಿಯನ್ನು ಮಾನ್ಯ ಆಡಳಿತಾಧಿಕಾರಿಗಳ ಕಛೇರಿಗೆ ರವಾನಿಸಲು ಇಂದಿನ ಸಭೆಯಲ್ಲಿ ತೀರ್ಮಾನಿಸಿರುವ ಮೇರೆಗೆ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

| ಕ್ರ ಸಂ | ಹಾಜರಾಗಿರುವ ಇಲಾಖೆಯ ಅಧಿಕಾರಿ/ನೌಕರರ ವಿವರಗಳು | ಸಹಿ/ಮೊಬೈಲ್ ಸಂಖ್ಯೆ | ಗೈರು ಹಾಜರಾಗಿರುವ ಇಲಾಖೆಯ ವಿವರಗಳು |
|---|---|---|---|
| 1 | ಶ್ರೀ.ಹೆಚ್.ವಿ.ನರೇಂದ್ರ ಕುಮಾರ್, ADTP (North)ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ | | 1) ಎಸ್.ಡಬ್ಲ್ಯೂ.ಡಿ |
| 2 | ಶ್ರೀ.ಲಕ್ಷ್ಮಣಪ್ಪ, ಸಿ.ವಿ. ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ 24 | | 2)ಬೆಸ್ಕಾಂ (ಬೀದಿ ದೀಪಗಳು) |
| 3 | ಶ್ರೀ ಗೋಪಾಲ್ ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ 24 | | 3) ಪಶು ಸಂಗೋಪನಾ ಇಲಾಖೆ |
| 4 | ಶ್ರೀ ಲಿಂಗರಾಜು, ಮಾರ್ಷಲ್. | | 4) ಪೋಲೀಸ್ ಇಲಾಖೆಯಿಂದ (ಸಂಚಾರಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆ) |
| 5 | ಶ್ರೀಮತಿ. ಮೀನಾ.ಬಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾ-24 | | 5) ಪಾಲಿಕೆಯ ಸಂಚಾರಿ ಇಂಜಿನಿಯರಿಂಗ್ ಸೆಲ್ |
| 6 | ಶ್ರೀ.ಮೊಹಮ್ಮದ್ಇಬ್ರಾಹಿಮ್. (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಇಲಾಖೆ | | |
| 7 | ಶ್ರೀ ಶ್ರೀಕಾಂತ್ ಅಸೆಸರ್, ಕಂದಾಯ ಇಲಾಖೆ, | | |

**ಇಂದಿನ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿಯ ಸದಸ್ಯರು ಹಾಗೂ ಸಾರ್ವಜನಿಕರ ವಿವರಗಳು**

1. ಶ್ರೀ.ರಾಕೇಶ್.ಎಸ್.ಜಿ, ವಾರ್ಡ್ ಸಮಿತಿಯ ಸದಸ್ಯರು
2. ಶ್ರೀಮತಿ.ಲತಾ ಗಣೇಶ್, ಸ್ಥಳೀಯರು
3. ಶ್ರೀ.ಮದನ್ ಪ್ರಸಾದ್ ವಾರ್ಡ್ ಸಮಿತಿಯ ಸದಸ್ಯರು.
4. ಶ್ರೀ. ಪ್ರಸನ್ನ.ಎ.ಆರ್, ವಾರ್ಡ್ ಸಮಿತಿಯ ಸದಸ್ಯರು
5. ಶ್ರೀ.ವಿಕ್ರಂ.ಎಂ.ವಿ, ಸ್ಥಳೀಯರು
6. ಶ್ರೀ.ಯಾಸೀನ್, ಸ್ಥಳೀಯರು
7. ಶ್ರೀ.ಅಶೋಕ್, ಸ್ಥಳೀಯರು
8. ಶ್ರೀ.ಜೆ.ಅಲೆಕ್ಸಾಂಡರ್ ವಿಜಯ್‌ಕುಮಾರ್, ಸ್ಥಳೀಯರು
9. ಶ್ರೀ.ಶಶಿ ಕುಮಾರ್, ಸ್ಥಳೀಯರು
10. ಶ್ರೀ ಪ್ರತಾಪ್, ಸ್ಥಳೀಯರು
11. ಶ್ರೀ.ರಮೇಶ್.ಎಂ, ಸ್ಥಳೀಯರು
12. ಶ್ರೀ ಪಿಚಾಂಡಿ, ಸ್ಥಳೀಯರು
13. ಶ್ರೀ ನಾರಾಯಣಸ್ವಾಮಿ, ಸ್ಥಳೀಯರು

680
19/12/21
AE-24
1941
16/2/21
mol
6 CHBR

ಇಂದಿನ ಸಭೆಗೆ ಆಗಮಿಸಿದ್ದ ಸಮಿತಿಯ ಎಲ್ಲಾ ಸದಸ್ಯರನ್ನು ಇತರೆ ಇಲಾಖೆಗಳ ಅಧಿಕಾರಿಗಳನ್ನು, ಮತ್ತು ಸ್ಥಳೀ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿಯವರಾದ ಆದರ ಸ್ವಾಗತವನ್ನು ಕೋರುವ ಮುಖಾಂತರ ಸಭೆಯನ್ನು ಪ್ರಾರಂಭಿಸಲಾಯಿತು.

ಇಂದು ನಡೆದ ಸಮಿತಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಯಿತು.

**ಸಮಸ್ಯೆ** (1) :- 14ನೇ ಮುಖ್ಯರಸ್ತೆಯಿಂದ 19ನೇ ಮುಖ್ಯರಸ್ತೆ, 5ನೇ ಬ್ಲಾಕ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಲಾಖೆಯವರು ಕುಡಿಯುವ ನೀರನ್ನು ದಿನಕ್ಕೆ ಮೂರು (03) ಬಾರಿ ಬಿಡುತ್ತಿರುವುದರಿಂದ ಈ ಬಾಗದ ನಿವಾಸಿಗಳಿಗೆ ಆಗುತ್ತಿರುವ ಅನಾನುಕೂಲದ ಬಗ್ಗೆ.

**ತೆಗೆದುಕೊಂಡಕ್ರಮ:-** ಸಂಬಂಧಪಟ್ಟ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆಯವರನ್ನು ತೆಗೆದುಕೊಂಡ ಕ್ರಮದ ಬಗ್ಗೆ ವಿವರಣೆಯನ್ನು ಕೇಳಿದಾಗ ಇಂದಿನ ಸಭೆಗೂ ಸಹಾ ಗೈರು ಹಾಜರಾಗಿರುವುದು ಕಂಡು ಬಂತು. ಈ ಸಮಸ್ಯೆಯನ್ನು ಸಂಘದ ಪಧಾದಿಕಾರಿಗಳು ಇಲಾಖೆಯ **ಕಾರ್ಯಪಾಲಕ ಅಭಿಯಂತರರಾದ ಶ್ರೀಚಲಪತಿ ರವರಿಗೆ** ಹಾಗು ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಹಾಗೂ ಸಹಾಯಕ ಅಭಿಯಂತರರ ಗಮನಕ್ಕೆ ತಂದರೂ ಸಹಾ ಸಮಸ್ಯೆ ಇನ್ನೂ ಪರಿಹಾರವಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇಲಾಖೆಯವರು ಸಭೆಗೂ ಹಾಜರಾಗದೇ ಸಾರ್ವಜನಿಕರಿಗೆ ಕುಡಿಯುವ ನೀರು ಇಲ್ಲದೇ ಉಂಟಾಗುತ್ತಿರುವ ಅನಾನುಕೂಲಗಳನ್ನು ಸರಿಪಡಿಸದೇ ಇರುವುದಕ್ಕೆ ಬೇಸರ ವ್ಯಕ್ತಪಡಿಸಿದರು. (9686566954)

**ಈ ಹಿನ್ನೆಲೆಯಲ್ಲಿ ಮುಂದಿನ ಸಭೆಗೆ ಇಲಾಖೆಯಿಂದ ಸಂಬಂದಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗುವಂತೆ ಎರಡನೇ ಪತ್ರದ ಮುಖಾಂತರ ತಿಳಿಸುವಂತೆ ಸಭೆಯಲ್ಲಿತೀರ್ಮಾನಿಸಲಾಯಿತು.**

**ಸಮಸ್ಯೆ2:-** ವಾರ್ಡ್ ವ್ಯಾಪ್ತಿಯ 18ನೇ ಮುಖ್ಯರಸ್ತೆ, ಕೆ.ಇ.ಬಿರಸ್ತೆ ಹಾಗೂ ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕರು ಚರಂಡಿ ನೀರನ್ನು ಬೃಹತ್ ನೀರುಗಾಲುವೆಗೆ ಬಿಡುತ್ತಿರುವುದರಿಂದ ದುರ್ವಾಸನೆ ಬರುತ್ತಿದ್ದು, ಅಕ್ಕ ಪಕ್ಕದ ನಿವಾಸಿಗಳಿಗೆ ವಾಸನೆಯಿಂದ ತೊಂದರೆಯಾಗುತ್ತಿರುವುದನ್ನು ತಡೆಗಟ್ಟುವುದು ಮತ್ತು18ನೇ ಮುಖ್ಯರಸ್ತೆಯಲ್ಲಿ ಚೇಂಬರ್ ಹಾಳಾಗಿದ್ದು, ಅದನ್ನು ಸರಿಪಡಿಸುವ ಬಗ್ಗೆ.

**ತೆಗೆದುಕೊಂಡಕ್ರಮ:-**ಈ ಸಮಸ್ಯೆಯನ್ನುತುರ್ತಾಗಿ ಸರಿಪಡಿಸುವ ಬಗ್ಗೆ ಹಿಂದಿನ ಸಭೆಯಲ್ಲಿ ಪ್ರಸ್ತಾಪವಾಗಿರುವ ನಡಾವಳಿಗಳನ್ನು ಬೃಹತ್ ನೀರುಗಾಲುವೆ ಇಲಾಖೆಯವರಿಗೆ ಕಾರ್ಯದರ್ಶಿಯವರು ತಿಳಿಸಿದ್ದರೂ ಸಹಾ ಸರಿಪಡಿಸದೇ ಇರುವುದನ್ನು ಸಭೆಗೆ ತಿಳಿಸಿದರು. ಈ ಕಲುಷಿತ ನೀರು ಕುಡಿಯುವ ನೀರಿನೊಂದಿಗೆ ಮಿಶ್ರಣವಾಗಿರುವುದರಿಂದ ಈ ಭಾಗದ ನಿವಾಸಿಗಳು ಅನಾರೋಗ್ಯದಿಂದ ಬಳಲುತ್ತಿರುವುದನ್ನು ಇಲಾಖೆಯ **ಸಹಾಯಕ ಅಭಿಯಂತರರಾದ ಶ್ರೀನಿವಾಸ್(9980644355)**ಎಂಬುವರಿಗೆ ತಿಳಿಸಿದ್ದರೂ ಸಹಾ ಸರಿಪಡಿಸಿರುವುದಲ್ಲವೆಂದು ಸಂಘದ ಪಧಾದಿಕಾರಿಗಳು ಬೇಸರ ವ್ಯಕ್ತಪಡಿಸಿದರು.

**ಈ ಹಿನ್ನೆಲೆಯಲ್ಲಿ ಮುಂದಿನ ಸಭೆಗೆ ಇಲಾಖೆಯಿಂದ ಸಂಬಂದಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಿ ಸಮಸ್ಯೆಯನ್ನು ತುರ್ತಾಗಿ ಸರಿಪಡಿಸುವಂತೆ ಎರಡನೇ ಪತ್ರದ ಮುಖಾಂತರ ತಿಳಿಸುವುದಕ್ಕೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

**ಸಮಸ್ಯೆ3:-** ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಹಾಳಾಗಿದ್ದು, ಅವುಗಳನ್ನು ಸರಿಪಡಿಸಲು (ಎಲ್.ಇ.ಡಿ) ಹಾಗೂ ಚಿಲ್ಡ್ರನ್ ಪಾರ್ಕ್‌ನಲ್ಲಿ ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ ಶ್ರೀ ಪ್ರತಾಪ್ ಮತ್ತು ಶ್ರೀ ಪಿಚಾಂಡಿ ರವರು ಪ್ರಸ್ತಾಪಿಸಿದರು.

**ತೆಗೆದುಕೊಂಡ ಕ್ರಮ:-** ಈಗಾಗಲೇ ಅಳವಡಿಸಿ ಕ್ರಮೇಣ ಹಾಳಾಗಿರುವ (ಎಲ್.ಇ.ಡಿ) ಬೀದಿ ದೀಪಗಳ ಬದಲಾಗಿ ಹೊಸ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ ಬೆಸ್ಕಾಂ ಇಲಾಖೆಯವರಿಗೆ ತಿಳಿಸಿದಾಗ ಹೊಸದಾಗಿ ಅಳವಡಿಸಲು ಅನುದಾನ ಲಭ್ಯವಿಲ್ಲವೆಂದು ಇದನ್ನು ಶಾಸಕರ ಅನುಧಾನದಲ್ಲಿ ಇಲಾಖೆಯವರು ತಿಳಿಸಿರುತ್ತಾರೆಂದು ಸಂಘದ ಪಧಾದಿಕಾರಿಗಳು ಸಭೆಗೆ ತಿಳಿಸಿದರು.

**ಬೆಸ್ಕಾಂ ಇಲಾಖೆಯ ಶ್ರೀ ಆನಂದ ಸಹಾಯಕ ಅಭಿಯಂತರರನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.**

**ಸಮಸ್ಯೆ4:-** ವಾರ್ಡ್ ವ್ಯಾಪ್ತಿಯಲ್ಲಿ ಚಿಕನ್ ಮತ್ತು ಮಟನ್‌ಅಂಗಡಿ ಮಾಲೀಕರು ತಮ್ಮ ತಮ್ಮ ಅಂಗಡಿ ತ್ಯಾಜ್ಯವನ್ನು ಬೃಹತ್ ನೀರುಗಾಲುವೆಗೆ ಸುರಿಯುತ್ತಿರುವುದರಿಂದ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಚರಂಡಿಯ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ.

**ತೆಗೆದುಕೊಂಡಕ್ರಮ:-** ಈ ಸಮಸ್ಯೆಯನ್ನುಪರಿಹರಿಸುವಂತೆ ಪಶುಸಂಗೋಪನಾ ಇಲಾಖೆಯವರಿಗೆ ತಿಳಿಸಿದ್ದರೂ ಸಹಾ ಸರಿಪಡಿಸಿರುವುದಿಲ್ಲವೆಂದು ಸಂಘದ ಪಧಾದಿಕಾರಿಗಳು ಸಭೆಗೆ ತಿಳಿಸಿ ಇಂದಿನ ಸಭೆಯಲ್ಲಿ ಈ ಇಲಾಖೆಯವರು ಗೈರು ಹಾಜರಾಗಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು.

**ಈ ಹಿನ್ನೆಲೆಯಲ್ಲಿ ಮುಂದಿನ ಸಭೆಗೆ ಇಲಾಖೆಯಿಂದ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಿ ಸಮಸ್ಯೆಯನ್ನು ತುರ್ತಾಗಿ ಸರಿಪಡಿಸುವಂತೆ ಎರಡನೇ ಪತ್ರದ ಮುಖಾಂತರ ತಿಳಿಸುವುದಕ್ಕೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

ಸಮಸ್ಯೆ5:- ಕೆ.ಪಿ.ಟಿ.ಸಿ.ಎಲ್ ನವರು ನಿರ್ಮಿಸುತ್ತಿರುವ 220 ಕಿ ವ್ಯಾಟಿನ ಕೇಬಲ್ಲನ್ನು ಅಳವಡಿಸಲು ಎಲ್.&ಟಿ ರವರು ಅಗೆದಿರುವ ರಸ್ತೆ ಬಾಗವನ್ನು ಸರಿಪಡಿಸುವ ಬಗ್ಗೆ.

ತೆಗೆದುಕೊಂಡಕ್ರಮ:- ಕೆ.ಪಿ.ಟಿ.ಸಿ.ಎಲ್ ನವರು ಈ ರಸ್ತೆಗಳನ್ನು ಸರಿಪಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಣಪಾವತಿರುವ ಬಗ್ಗೆ ಇರುವ ಫೈಲನ್ನು ತೆಗೆದುಕೊಂಡು ಇದನ್ನು ತುರ್ತಾಗಿ ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳುವುದಾಗಿ ಕಾಮಗಾರಿ ಇಲಾಖೆಯವರ(ಕಾರ್ಯದರ್ಶಿ) ಸಭೆಗೆ ತಿಳಿಸಿದರು.

ಸಮಸ್ಯೆ 6:- ಶ್ರೀ ಪ್ರತಾಪ್ ರವರು 5ನೇ ಬ್ಲಾಕಿನಲ್ಲಿ ಅಳವಡಿಸಿರುವ 6 ಸಿ ಸಿ ಕ್ಯಾಮರಾಗಳು ನಿರ್ವಹಿಸುತ್ತಿಲ್ಲವೆಂದು ತಿಳಿಸಿ ಇವುಗಳನ್ನು ಸರಿಪಡಿಸುವಂತೆ ಕೋರಿದರು.

ತೆಗೆದುಕೊಂಡ ಕ್ರಮ:- ಈ ಸಂಬಂದ ಸಭೆಗೆ ಹಾಜರಾಗದೇ ಇದ್ದ ಶ್ರೀ ಗುಣಶೇಖರ್ ರವರನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ ಇದನ್ನು ತುರ್ತಾಗಿ ಸರಿಪಡಿಸಲಾಗುವುದೆಂದು ತಿಳಿಸಿದರು.

**ಮೇಲಿನ ಎಲ್ಲಾ ಸಮಸ್ಯೆಗಳು 2020ನೇ ಸಾಲಿನವುಗಳಾಗಿದ್ದು.**

ಹೊಸ ವರ್ಷವಾದ 2021ನೇ ಸಾಲಿನಲ್ಲಿ ಪ್ರಸ್ತಾಪಿಸಿದ 6 ಸಮಸ್ಯೆಗಳ ಪೈಕಿ ಮೊದಲನೆಯದಾಗಿ ಹೆಣ್ಣೂರು ಗ್ಯಾರೇಜ್ ಹತ್ತಿರವಿರುವ ಸರ್ವಿಸ್ ರಸ್ತೆಯನ್ನು ದ್ವಿಮುಖ ರಸ್ತೆ ಇದ್ದುದನ್ನು ಏಕಮುಖ ರಸ್ತೆಯನ್ನಾಗಿ ಮಾಡಿರುವುದರಿಂದ ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗಿದ್ದು ಇದನ್ನು ತುರ್ತಾಗಿ ತೆರವುಗೊಳಿಸಬೇಕೆಂದು ಕೋರಲಾಗಿತ್ತು.

ತೆಗೆದುಕೊಂಡಕ್ರಮ:- ಈ ಸಮಸ್ಯೆಯನ್ನು ಈಗಾಗಲೇ ಪರಿಹರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಲಾಗಿದೆಯೆಂದು ಸದಸ್ಯರು ಸಭೆಗೆ ತಿಳಿಸಿದರು.

ಸಮಸ್ಯೆ2:- ವಾರ್ಡ್ ವ್ಯಾಪ್ತಿಯಲ್ಲಿನ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗಗಳ ಮೇಲೆ ಹಾಕಿರುವ ಗ್ಯಾರೇಜ್ ನವರು ಹಳೇ ವಾಹನಗಳನ್ನು ತೆರವುಗೊಳಿಸುವ ಬಗ್ಗೆ .

ತೆಗೆದುಕೊಂಡ ಕ್ರಮ:- ಸಂಚಾರಿ ಇಲಾಖೆಯ ಲಿಂಗರಾಜುರವರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದಾಗ ಸಂಪರ್ಕ ಸಿಗಲಿಲ್ಲ (96635 66456) ಮತ್ತೊಮ್ಮೆ ಸಂಪರ್ಕಿಸಿದಾಗ ಇದನ್ನು ತುರ್ತಾಗಿ ಸರಿಪಡಿಸುವಂತೆ ತಿಳಿಸಿದರು. ಮುಂದುವರೆದಂತೆ ಹಳೇ ವಾಹನಗಳನ್ನು ಡಂಪ್ ಮಾಡಲು ಖಾಲಿಜಾಗವನ್ನು ನೀಡಿರುವುದಾಗಿ ಶ್ರೀ ಮದನ್ ಪ್ರಸಾದ್ ರವರು ಸಭೆಗೆ ತಿಳಿಸಿದರು.

ಸಮಸ್ಯೆ 3:- ಟ್ರಾಫಿಕ್ ಸಿಗ್ನಲ್ಲಗಳನ್ನು ಪೆಟ್ರೋಲ್ ಬಂಕ್ ಮತ್ತು ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ ಅಳವಡಿಸಲು ಕೆ.ಜಿ.ಹಳ್ಳಿ ಪೋಲಿಸ್ ಠಾಣೆಯಲ್ಲಿ ಮಂಜೂರು ಪತ್ರ ಇರುವುದಾಗಿ ಶ್ರೀ ಮದನ್ ಪ್ರಸಾದ್ ರವರು ಸಭೆಗೆ ತಿಳಿಸಿದರು.

ಸಮಸ್ಯೆ 4:- ಹೆಣ್ಣೂರು ಮೇಲ್ಸೇತುವೆಯ ಮೇಲೆ ಅತಿ ಹೆಚ್ಚು ಬಾರದ ವಾಹನಗಳನ್ನು ನಿಲ್ಲಿಸಲು ಅವಕಾಶ ಕೊಡಬಾರದೆಂದು ಕೋರಿದ್ದರು.

ತೆಗದುಕೊಂಡ ಕ್ರಮ:- ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಶ್ರೀ ಲಿಂಗರಾಜು ರವರಿಗೆ ತಿಳಿಸಲಾಯಿತೆಂದು ಕಾರ್ಯದರ್ಶಿರವರು ಸಭೆಗೆ ತಿಳಿಸಿದರು.

ಸಮಸ್ಯೆ 5:- ಶ್ರೀ ಗಂಗಾಧರ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಚಿಕ್ಕಣ್ಣ ಬಡಾವಣೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇರುವುದರಿಂದ ಕೊಳವೆ ಬಾವಿಯನ್ನು ಸರಿಪಡಿಸಬೇಕೆಂದು ಮತ್ತು ಒಂಟಿ ಮನೆ ಯೋಜನೆಯಲ್ಲಿ ರಾಮಚಂದ್ರಪ್ಪ ಬಡಾವಣೆಯಲ್ಲಿ ಕಟ್ಟಡವನ್ನು ನಿರ್ಮಿಸಿಕೊಂಡಿರುವ 1) ಶ್ರೀಮತಿ ಜ್ಞಾನಮಣಿ ಕೋಂ ಏಸು ನಂ 133, ಕರಿಯಣ್ಣ ಪಾಳ್ಯ ಮತ್ತು 2) ಶ್ರೀಮತಿ ಕೆ.ಎಸ್.ಈಶ್ವರಿ ಕೋಂ ರವಿಚಂದ್ರ ಟಿ. ರವರಿಗೆ ತಲಾ ರೂ.4.00 ಲಕ್ಷಗಳಂತೆ ಒಟ್ಟು ರ.8.00 ಲಕ್ಷಗಳಿಗೆ ಬಿಲ್ಲನ್ನು ತಯಾರಿಸಿ ಪಾವತಿ ಮಾಡಲು ತೀರ್ಮಾನಿಸಲಾಯಿತು.

ಹಿಂದಿನ ಸಭೆಯಲ್ಲಿ ಪ್ರಸ್ತಾಪವಾದ ಮೇಲಿನ ಎಲ್ಲಾ ಸಾರ್ವಜನಿಕ ಸಮಸ್ಯೆಗಳನ್ನು ಸಭೆಯಲ್ಲಿ ಹಾಜರಿದ್ದ ಇಲಾಖೆಯವರು ತುರ್ತಾಗಿ ಪರಿಹರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿದ್ದ ಇಲಾಖೆಯ ಅಧಿಕಾರಿ / ನೌಕರರು ಮುಂದಿನ ಸಭೆಗೆ ತಪ್ಪದೆ ಹಾಜರಾಗಿ ಸಾರ್ವಜನಿಕ ಕುಂದು ಕೊರತೆಗಳನ್ನು ಶೀಘ್ರ ಪರಿಹಾರ ಕ್ರಮ ಕೈಗೊಳ್ಳಬೇಕೆಂದು ಸಮಿತಿಯ ಸದಸ್ಯರು, ನೋಡಲ್ ಅಧಿಕಾರಿಗಳು ಕಟ್ಟುನಿಟ್ಟಾಗಿ ಸೂಚಿಸಿದರು.

ಸಮಿತಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಹಾಗೂ ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ನೋಡಲ್ ಅಧಿಕಾರಿಯವರ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಿ.ವಿ.ಲಕ್ಷ್ಮಣಪ್ಪ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ ಸದಸ್ಯರು
ವಾರ್ಡ್ ಸಂಖ್ಯೆ.24 ಹೆಚ್.ಬಿ.ಆರ್ ಲೇಔಟ್

(ಹೆಚ್.ವಿ.ನರೇಂದ್ರಕುಮಾರ್)
ಸಹಾಯಕ ನಿರ್ದೇಶಕರು, ನಗರಯೋಜನೆ (ಉತ್ತರ)
ನೋಡಲ್‌ಅಧಿಕಾರಿ& ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ.24

ಪ್ರತಿಯನ್ನು:

1. ಮಾನ್ಯ ಆಡಳಿತ ಅಧಿಕಾರಿಗಳು ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ಪೂರ್ವ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಫ್ರೆಜರ್‌ಟೌನ್‌ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪೂರ್ವ) ರಸ್ತೆ ಮೂಲಭೂತ ಸೌಕರ್ಯ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಪೋಲೀಸ್‌ಇನ್ಸ್‌ಪೆಕ್ಟರ್, (ಸಂಚಾರ) ಕೆ.ಜಿ.ಹಳ್ಳಿ ಪೋಲೀಸ್‌ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಪೋಲೀಸ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೋಲೀಸ್‌ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ಕಲ್ಯಾಣ ಇಲಾಖೆ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
15. ಪಶು ಸಂಗೋಪನಾ ಇಲಾಖೆ, (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
16. ಕಛೇರಿಕಡತಕ್ಕೆ.